Reg. No. | | | | | | | | | | | | |

**BCMKALN 202**

**II Semester B.Com. Examination, June/July 2024**
**(2022-23 Batch Onwards) (NEP 2020)**
**KANNADA**
**Kannada Language (AECC)**

ಸಮಯ : 2 ಗಂಟೆಗಳು ಗರಿಷ್ಠಾಂಕಗಳು : 60

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳನ್ನು ಉತ್ತರಿಸಿರಿ. **(2×8=16)**

1) ಡಿ.ವಿ.ಜಿ.ಯವರ ದೃಷ್ಟಿಯಲ್ಲಿ ಸೌಂದರ್ಯ ಮತ್ತು ಅದರ ವಿವಿಧ ಮಜಲುಗಳನ್ನು ದೃಷ್ಟಾಂತಗಳೊಂದಿಗೆ ಚರ್ಚಿಸಿರಿ.

2) 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಕೀರ್ತನೆಯಲ್ಲಿ ವ್ಯಕ್ತವಾಗಿರುವ ಡಾಂಭಿಕತೆ ಮತ್ತು ಶೋಷಣೆಯ ಮುಖಗಳನ್ನು ಕುರಿತು ವಿಮರ್ಶಿಸಿರಿ.

3) ಜಗತ್ತು ಸೃಷ್ಟಿಯ ಸನ್ನಿವೇಶವು ಮಂಟೇಸ್ವಾಮಿ ಕಾವ್ಯದಲ್ಲಿ ಹೇಗೆ ಮೂಡಿಬಂದಿದೆ ? ಚರ್ಚಿಸಿರಿ.

4) ನಂಬಿದ ಕೃಷಿಯು ಎಂದಿಗೂ ಕೈಬಿಡದು ಎಂಬ ಅಂಶವು 'ಅನ್ನದಾತ' ಕಥೆಯಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(2×6=12)**

1) 'ಜಡೆ' ಕವಿತೆಯ ಹಲವು ಆಯಾಮಗಳನ್ನು ವಿವರಿಸಿರಿ.

2) ಅಮರನಾಥ ಕ್ಷೇತ್ರದ ಪೌರಾಣಿಕ ಹಿನ್ನೆಲೆಯನ್ನು ವಿವರಿಸಿರಿ.

3) 'ಒಂದು ಖಾಲಿ ಜಾಗ' ಕವನದ ಆಶಯವನ್ನು ಬರೆಯಿರಿ.

4) ಜ್ಞಾಪನ ಪತ್ರ ಎಂದರೇನು ? ಸೋದಾಹರಣವಾಗಿ ವಿವರಿಸಿರಿ.

S.D.M.C. OF BUSINESS MANAGEMENT LIBRARY

III. **ಒಂದು** ಪದ್ಯದ ಸಂದರ್ಭ ಸೂಚಿಸಿ, ಭಾವ ಸ್ವಾರಸ್ಯವನ್ನು ವಿವರಿಸಿರಿ. **(1×4=4)**

1) ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ ।
ನಾಗಿಯುಮೇನೋ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್

P.T.O.

2) ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ
ಸುಳಿದು ಬೀಸುವ ವಾಯು ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ರಾಮನಾಥಾ

IV. ಯಾವುದಾದರೂ **ಮೂರು** ವಾಕ್ಯಗಳ ಸಂದರ್ಭ ಸೂಚಿಸಿ, ವಿಶೇಷತೆಯನ್ನು ತಿಳಿಸಿರಿ. **(3×4=12)**

1) ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ.
2) ಅನ್ಯರಿಗೆ ಬೋಧನೆ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ.
3) ತಪ್ಪು ಒಪ್ಪು ನಿನ್ನ ಪಾದಕ್ಕೆ ಅರುವಾಗಲಪ್ಪ.
4) ಭೀಮಂಗೆ ಒಂದು ಗೆತಿ ತೋರುಸೆಕು.
5) ಕ್ರಯ-ವಿಕ್ರಯಗಳ ತಕ್ಕಡಿಯೊಳಗೆ ತೂಗಿಸಿಕೊಂಡೇ ನಿಲ್ಲುತ್ತವೆ.

V. ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×4=8)**

1) ಪಂಪ.
2) ಕನಕದಾಸ.
3) ಧರ್ಮವಿಜಯ.
4) ಆದೇಶಪತ್ರ.

S.D.M.C. OF BUSINESS MANAGEMENT LIBRARY

VI. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ. **(8×1=8)**

1) ಪಂಪನ ಆಶ್ರಯದಾತ ಯಾರು ?
2) ಜಿ. ಎಸ್. ಶಿವರುದ್ರಪ್ಪನವರ ಆತ್ಮಕಥನ ಯಾವುದು ?
3) ಕನಕದಾಸರ ಅಂಕಿತನಾಮವೇನು ?
4) ಕನ್ನಡದ ಆದ್ಯ ವಚನಕಾರ ಯಾರು ?
5) ಹವಿಗನ್ನಡದ ಮಹಾಕವಿಯೆಂದು ಪ್ರಸಿದ್ಧರಾದವರು ಯಾರು ?
6) 'ಒಂದು ಖಾಲಿ ಜಾಗ' ಕವನವನ್ನು ಬರೆದವರು ಯಾರು ?
7) 'ಕಲ್ಲುದೇವರು ಕರಗಲಿಲ್ಲ' ಕಥಾಸಂಕಲನದಿಂದ ಪಠ್ಯಕ್ಕೆ ಆಯ್ದುಕೊಳ್ಳಲಾದ ಕಥೆಯ ಶೀರ್ಷಿಕೆಯೇನು ?
8) ರಾಜಶೇಖರ ಭೂಸನೂರಮಠ ಇವರಿಗೆ ಸಲ್ಲಿಕೆಯಾದ ಅಭಿನಂದನ ಗ್ರಂಥ ಯಾವುದು ?

---